ಅಭಿಯಾಚನೆ ಕ್ರಮಾಂಕ–೨೮ ರಸ್ತೆ ಸಾರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೨೫,೪೫,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫,೦೭,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಕೆಗಳನ್ನು ಮಂಡನೆ ಮಾಡಲಾಯಿತು.

ಧರಣಿ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲು ಮನವಿ

ಶ್ರೀ ಬಿ. ಎಸ್. ಯಡಿಯೂರಪ್ಪ.— ವಿರೋಧಪಕ್ಷದ ಸದಸ್ಯರನ್ನು ಇಲ್ಲಿ ಬಿಟ್ಟು ಈ ತರಹ ಮಾಡುವುದು ಸರಿಯಾದುದಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ನಿನ್ನೆಯ ದಿವಸ ನಾನು, ಮಾನ್ಯ ವೆಂಕಟರಾವಣಯ್ಯನವರು ಯಡಿಯೂರಪ್ಪನವರು ಅಲ್ಲಿ ಕುಳಿತುಕೊಂಡು ಮಾತನಾಡಿದಾಗ, ಆ ಸಂದರ್ಭದಲ್ಲಿ ಬಂದಂತಹ ಇಂಡಿಕೇಷನ್, ಇವತ್ತು ಈ ವ್ಯವಹಾರವನ್ನು ಮುಗಿಸೋಣ ಸಭೆಯ ಭಾವಿಯಲ್ಲಿರುವವರನ್ನು ಮೇಲಕ್ಕೆ ತರಲಿಕ್ಕೆ ಪ್ರಯತ್ನ ಮಾಡೋಣವೆಂದು ತಿಳಿಸಲಾಗಿತ್ತು. ಮೊನ್ನೆ ದಿವಸ ಮಾನ್ಯ ಬೊಮ್ಮಾಯಿಯವರು ದೇವೇಗೌಡರು ಎಲ್ಲರೂ ಸಹ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ ತಿರ್ಮಾನ ಮಾಡೋಣ ವೆಂದು ಹೇಳಿದ್ದಾರೆ. ನಿನ್ನೆ ಮೊನ್ನೆ ಇದರಬಗ್ಗೆ ಒಂದು ತೀರ್ಮಾನ ಮಾಡಿ ಎಂದು ನಾವು ಆನೇಕ ಸಲಹೆಗಳನ್ನು ಕೊಟ್ಟಿದ್ದೇವೆ. ನಾವು ಕೊಟ್ಟಂತಹ ಸಲಹೆಗಳನ್ನು ದುರದೃಷ್ಟವಶಾತ್ ಆ ಕಡೆಯವರು ಒಪ್ಪಿಕೊಳ್ಳಲಿಲ್ಲ. ಲ್ಲಿವರು ಒಪ್ಪದೇ ಇರುವುದರಿಂದ ನಾವು ಕೊಟ್ಟಂತಹ ಸಲಹೆಗಳು ಬಿದ್ದುಹೋಗಿವೆ. ಸೋಮವಾರ ಮುಖ್ಯ ಮಂತ್ರಿಗಳು ಬರುತ್ತಾರೆ ಖಂಡಿತಾ ಇತ್ಯರ್ಥ ಮಾಡುತ್ತೇವೆಂದು ಮೊನ್ನೆ ದಿವಸ ಹೇಳಿದ್ದಾರೆ. ಆದರೆ ಇವತ್ತು ಅದಕ್ಕೆ ತದ್ವಿರುದ್ಧವಾಗಿ ನಡೆದಿದೆ. ಮುಖ್ಯಮಂತ್ರಿಗಳು ಬಂದಮೇಲೆ ನೀವು ಯೋಚನೆ ಮಾಡಿ ಪ್ರಶ್ನೆಯನ್ನು ಇತ್ಯರ್ಥ ಮಾಡಿ ಎಂದು ಹೇಳಿದರೆ, ಇವತ್ತಿನ ದಿವಸ ಚರ್ಚೆ ಮಾಡಿದಾಗ ಪರಿಸ್ಥಿತಿ ಬಿಗಡಾಯಿಸುವ ಹಂತಕ್ಕೆ ಹೋಗಿದೆ. ಒಂದು ತರಹ ಮನೋಭಾನುವಾರದಿಂದ ಆ ಕಡೆಯವರು ಈ ಕಡೆಯವರು ಇಬ್ಬರೂ ಪಟ್ಟುಹಿಡಿದು ಕುಳಿತಿದ್ದಾರೆ. ಇವರು ಇಷ್ಟೊಂದು ಹೆಜ್ಜೆ ಮುಂದಕ್ಕೆ ಹೋಗಿದ್ದಾರೆ. ಮಾನ್ಯ ಆಡ್ಯಂತಾಯವರು ಮತ್ತು ಉ ರಬ್ಬರವರ ಹೇಳಿಕೆಗಳು ಪತ್ರಿಕೆಗಳಲ್ಲಿ ಬಂದಿವೆ. ಅವರು ಬರೆದುಕೊಟ್ಟರೆ ಮಾತ್ರ ಆಗಬಹುದೆಂದು ವ ವರು ಹೇಳುತ್ತಿದ್ದಾರೆ. ಈಗ ಒಂದು ರೀತಿಯ ಹೊಸ ಹೊಸ ಸೂಚನೆಗಳು ಬಂದಿವೆ. ಮೊನ್ನೆಯಿನತನಕ ಬೇರೆ ಸೂಚನೆಗಳು ಇದ್ದವು ನಾನು ಎಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಸೂಚನೆಗಳ ನ್ನು ಯಾರೇ ಒಪ್ಪಿಕೊಳ್ಳಲಿ ಬಿಡಲಿ, ಮುಖ್ಯವಾಗಿ ನಾನು ಯಡಿಯೂರಪ್ಪನವರು, ವೆಂಕಟರಾಮಯ್ಯನವರು ಪ್ರಯತ್ನಪಟ್ಟಿದ್ದೇವೆ. ಈಗ ಒಂದು ನಾರ್ಮಲ್‌ನಿಗೆ ಬರಲಿ. ಮಿಕ್ಕ ವಿಷಯಗಳನ್ನು ಆ ಮೇಲೆ ಚರ್ಚೆಮಾಡೋಣ. ನಾವು ಪ್ರಾಮಾಣಿಕವಾಗಿ ಪ್ರಯತ್ನಪಟ್ಟಿದ್ದೇವೆ. ಹೆಚ್ಚು ಜವಾಬ್ದಾರಿ ಆಳಂವವರಿಗೆ ಇದೆ. ವಿರೋಧ ಪಕ್ಷದವರಿಗೆ ಕೂಡ ಜವಾಬ್ದಾರಿ ಇದೆ. ಮುಖ್ಯವಾಗಿ ವಿರೋಧ ಪಕ್ಷದವರು ಇವತ್ತಿನ ದಿವಸ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುವ ಹಾಗೆ ಮಾಡಿದ್ದಾರೆ. ಇದು ನನ್ನ ಸ್ವಂತ ಅಭಿಪ್ರಾಯ.

ನಿನ್ನೆಯ ದಿವಸ ಶ್ರೀಆಡ್ಯಂತಾಯ ಮತ್ತು ಶ್ರೀಉಮರಬ್ಬನವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ.ಅದೂ ಪತ್ರಿಕೆಗಳಲ್ಲಿ ಬಂದಿದೆ. ನಾನು ಸಹ ಓದಿದ್ದೇನೆ ಓದಿದಮೇಲೆ ನನಗೆ ಏನು ಅನಿಸಿತು ಎಂದರೆ ಆಗಿರುವ ಪರಿಸ್ಥಿತಿಗೆ ಇನ್ನೂ ಹೆಚ್ಚಿನ ತೊಂದರೆ,ಕ್ಲಿಷ್ಟತೆ ಬರುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಇದರಿಂದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆ ದಾರಿಯಲ್ಲಿ ಹೋಗುವುದಕ್ಕೆ ಆಗುವುದಿಲ್ಲ. ಮಾನ್ಯ ಬೊಮ್ಮಾಯಿಯವರು ಹುಬ್ಬಳ್ಳಿಯಲ್ಲೂ ಸ್ಟೇಟ್‌ಮೆಂಟ್ ಕೊಟ್ಟರು.ಶ್ರೀ ದೇವೆಗೌಡರು ಹಾಸನದಲ್ಲಿ ಸ್ಟೇಟ್‌ಮೆಂಟ್ ಕೊಟ್ಟರು, ಆದರ ತಿರುಳು ಏನೇ ಇರಬಹುದು. ಶ್ರೀ ಉಮರಬ್ಬ, ಆಡ್ಯಂತಾಯ ಹೇಳಿದ್ದಕ್ಕಿಂತ

ಇದು ಬೇರೆ ಇರಬಹುದು. ಇಂತಹ ಸಂದರ್ಭದಲ್ಲಿ ಇಂತಹ ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟರೆ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುತ್ತದೆಯೇ ವಿನಹ ಬಗೆ ಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಇವೊತ್ತು ಬೆಳಿಗ್ಗೆ ಕೂಡ ನಾನು ಪ್ರಯತ್ನ ಪಟ್ಟೆ. ನನ್ನ ಜೊತೆ ಶ್ರೀ ವೆಂಕಟರಾಮಯ್ಯನವರು ಮತ್ತು ಶ್ರೀ ಯಡಿಯೂರಪ್ಪನವರು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ಸಂಧಾನ ಮುರಿದುಬಿದ್ದಿತು. ಇದು ಮುರಿದುಬಿದ್ದ ಕಾರಣ ನನ್ನ ಅಭಿಪ್ರಾಯದಲ್ಲಿ ಇದಕ್ಕೆ ಮುಖ್ಯವಾದಜವಾಬ್ದಾರಿ ಆಡಳಿತಪಕ್ಷದವರದ್ದು. ಇವರದ್ದು ಕೂಡ ಸ್ವಲ್ಪ ಜವಾಬ್ದಾರಿ ಇದೆ. ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈಗ ಏನೂ ಮಾಡುವುದಕ್ಕೆ ಆಗುವುದಿಲ್ಲ ನಮ್ಮ ಸಂಧಾನ ಹೋಯಿತು. ಕೃಷ್ಣ ಸಂಧಾನ ಇಲ್ಲ. ಚಾರಿತ್ರಿಕವಾಗಿಯೂ ಕೂಡ ಇದು ಮುರಿದು ಬಿದ್ದಿತ್ತು. ಆಡಳಿತ ಪಕ್ಷದ ಕೆಲವು ಸದಸ್ಯರು ನನ್ನ ಕಡೆಗೆ ಬೊಟ್ಟು ಮಾಡಿ ತೋರಿಸಿದರು. ನಾನು ನೋಡುತ್ತಿದ್ದೇನೆ...

ಶ್ರೀ ವೇದಾಂತ ಹೆಬ್ಬಿಗೆ.— ನಿಮಗೆ ಕುರುಕ್ಷೇತ್ರ ಬೇಕಾಗಿತ್ತು. ಅದಕ್ಕೋಸ್ಕರವೇ ಸಂಧಾನ ಮಾಡಿದಿರಿ.

ಅಧ್ಯಕ್ಷರು.—ಶ್ರೀ ಕೃಷ್ಣನ್‌ರವರೇ, ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಿಮ್ಮ ಅಭಿಪ್ರಾಯ ಹೇಳಿ.

ಶ್ರೀ ಎಂ.ಎಸ್. ಕೃಷ್ಣನ್.—ಇವರಿಗೆ ಒಳ್ಳೆ ಕೆಲಸ ಮಾಡಿದ್ದೇವೆ ಎಂಬ ಅಭಿಪ್ರಾಯ ಬಂದಿದೆ. ಗೆದ್ದುಬಿಟ್ಟಿದ್ದೇವೆ ಎಂಬ ಅಭಿಪ್ರಾಯ ಬಂದುಬಿಟ್ಟಿದೆ. ನಾನು ದುಃಖದಿಂದ ಹೇಳುತ್ತೇನೆ. ಈ ರೀತಿಯ ಮನೋಭಾವನೆ ಸರಿಯಲ್ಲ. ಏನು ಬೇಕಾದರೂ ಮಾಡುತ್ತೇವೆ ಮೆಜಾರಿಟಿ ಇದೆ, ಮಾಡಿಕೊಂಡು ಹೋಗುತ್ತೇವೆ ಎನ್ನುವ ಅಭಿಪ್ರಾಯ ಇಟ್ಟುಕೊಂಡು ಮಾತನಾಡಿದರೆ ಅದು ಸರಿಯಲ್ಲ. ಮುಂದುಗಡೆ ಸಾಲಿನಲ್ಲಿ ಇರುವ ಅತಿರಥ ಮಹಾರಥರು ಆ ರೀತಿ ಮಾತನಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಹಿಂದೆ ಕುಳಿತಿರುವವರು ಮಾತನಾಡುತ್ತಿದ್ದಾರೆ. ಇದು ಸರಿಯಾದ ಮನೋಭಾವ ಅಲ್ಲ.

ಅಧ್ಯಕ್ಷರು.—ಸಮಸ್ಯೆ ಬಗೆಹರಿಸುವುದಕ್ಕೆ ನಿಮ್ಮ ಸಲಹೆ ಏನು ಹೇಳಿ ?

ಶ್ರೀ ಎಂ.ಎಸ್. ಕೃಷ್ಣನ್.—ನಾನು ಮೊದಲೇ ಹೇಳಿದ್ದೇನೆ. ಮಾನ್ಯ ಮುಂಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಶ್ರೀಅಡ್ಯಂತಾಯ ಅವರ ಸಸ್ಪೆನ್‌ಷನ್ ರಿವೋಕ್ ಅನ್ನುಮಾಡಲಿ ಅದರ ಆಧಾರದ ಮೇಲೆ ಈ ಕಡೆಯಿಂದ ವಿರೋಧಪಕ್ಷದ ನಾಯಕರು ಅಥವಾ ಉಪನಾಯಕರು ಯಾರಾದರೂ ಸರಿ, ಅವರೂ ಕೂಡ ವಿಷಯವನ್ನು ಹೇಳಿ ವಿಷಾದವನ್ನು ವ್ಯಕ್ತಪಡಿಸುವಂಥ ಜವಾಬ್ದಾರಿ ಅವರದ್ದು ಇದೆ. ಈಗ ಮಾನ್ಯ ಮುಂಖ್ಯಮಂತ್ರಿಗಳು ಬಂದಿದ್ದಾರೆ. ಈಗಲಾದರೂ ಇದರ ಬಗ್ಗೆ ಯೋಚನೆ ಮಾಡಿದರೆ ಒಳ್ಳೆಯದು. ಇಲ್ಲಿ ಈಗ ಮುಂಖ್ಯಮಂತ್ರಿಗಳ ಬೇಡಿಕೆಗಳು ಇವೆ, ಪೋಲಿಸ್ ಇದೆ, ಜೇಲ್ ಇದೆ, ಸಣ್ಣ ಉಳಿತಾಯ ಇದೆ, ಇವೆಲ್ಲವನ್ನೂ ಐದು ನಿಮಿಷದಲ್ಲಿ ಪಾಸ್ ಮಾಡಿಕೊಂಡು ಹೋದರೆ ಇದು ಎಂತಹ ಪ್ರಜಾಪ್ರಭುತ್ವ ? It is a total mockery of democracy. ಇದು ಹಾಸ್ಯಾಸ್ಪದ ಆಗುತ್ತದೆ. ಜನರು ಬಯ್ಯುತ್ತಿದ್ದಾರೆ. ಎಲ್ಲರೂ ಟೀಕೆ ಮಾಡುತ್ತಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಈಗಲಾದರೂ ಇದರ ಬಗ್ಗೆ ಒಂದು ಸರಿಯಾದ ನಿಲುಮೆಯನ್ನು ತಾಳಿ ಒಳ್ಳೆಯ ವಾತಾವರಣವನ್ನು ಕಲ್ಪಿಸಿಕೊಡಬೇಕು. ಸಭೆಯ ಬಾವಿಯಲ್ಲಿ ಇರತಕ್ಕಂಥ ಸದಸ್ಯರು ಪ್ರತಿಭಟನೆಯನ್ನು ತೋರಿಸಿದ್ದೀರಿ. ನಡೆದಿದ್ದು ಆಯಿತು. ಈಗ ಹೊಸ ರೀತಿಯಲ್ಲಿ ಯೋಚನೆ ಮಾಡಬೇಕು, ಈಗಿರುವ ದಾರಿಯಲ್ಲೇ ಹೋದರೆ ಆಗುವುದಿಲ್ಲ. ಬೇಡಿಕೆಗಳ ಮೇಲೆ ಚರ್ಚೆ ಆಗಬೇಕು ಇಷ್ಟೆಲ್ಲಾ ಹೇಳಿದರೂ ಅವರು ಒಪ್ಪಿಕೊಳ್ಳುತ್ತಾರೆ ಎಂಬ ನಂಬಿಕೆ ನನಗಿಲ್ಲ. ಒಪ್ಪಿದರೆ ಸಂತೋಷ ಏಕೆಂದರೆ ಮೊದಲು ಮಾತನಾಡಿದಾಗಲೂ ಒಪ್ಪಿಕೊಳ್ಳಲಿಲ್ಲ. ಇಷ್ಟಕ್ಕೂ ಇವರು ಧರಣಿ ನಡೆಸಬೇಕೆಂದು ಹೇಳಿದರೆ, ಡಿಬೇಟ್‌ನಲ್ಲಿ ಪಾರ್ಟಿಸಿಪೇಟ್ ಮಾಡುವುದಕ್ಕೆ ಆಗುವುದಿಲ್ಲ. ಇಷ್ಟು ಮಾತ್ರ ನಾನು ಹೇಳಬಲ್ಲೆ.

ಶ್ರೀ ಆರ್. ವೆಂಕಟರಾಮಯ್ಯ.—ನಾವು ೨೨೫ ಜನ ಸದಸ್ಯರಿದ್ದೇವೆ. ನಾಲ್ಕು ಕೋಟಿ ಜನರ ರೆಪ್ರಸೆಂಟೇಟಿವ್ಸ್ ಆಗಿದ್ದೇವೆ. ಈ ಪರಿಸ್ಥಿತಿ ಬಗೆಹರಿಯದೆ ಸಮಸ್ಯೆಯಾಗಿದೆ. ಇದರಿಂದ ಕರ್ನಾಟಕದಲ್ಲಿ ನಗೆಪಾಟಲಿಗೀಡಾಗಿದ್ದೇವೆ. ಕರ್ನಾಟಕದ ಬೀದಿಯಲ್ಲಿ ಹೋದರೆ, ದಿನವೂ ಏನಂ ಅಸೆಂಬ್ಲಿಯಲ್ಲಿ ಗಲಾಟೆ ಎಂದು ಕೇಳುತ್ತಾರೆ. ಒಂದು ದಿವಸ ಆಯಿತು, ಎರಡು ದಿವಸ ಆಯಿತು, ಆದರೆ ಪ್ರತಿ ದಿವಸವೂ ಕೂಡ ಇದೇ ತರಹ ಆದರೆ ಕಷ್ಟವಾಗುತ್ತದೆ.

ಅಧ್ಯಕ್ಷರು.—ಯಾವುದಾದರೂ ಸೆಲ್ಯೂಷನ್ ಹೇಳಿ, ಅವರು, ಇವರೂ, ಇಬ್ಬರೂ ಸರಿಯಾಗ ಬೇಕು. ಆ ರೀತಿ ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಕಾಂಗ್ರೆಸ್ ಸದಸ್ಯರು ಏನು ಧರಣಿ ಮಾಡುತ್ತಿದ್ದಾರೆ ಅವರು, ಅಡ್ಯಂತಾಯ ಅವರದು ತಪ್ಪಾಗಿದೆ ಎಂದು ಹೇಳಿ ಒಪ್ಪಿಕೊಳ್ಳಲಿ. ವಿರೋಧಪಕ್ಷದ ನಾಯಕಿಯರೇ ತಪ್ಪು ಎಂದು ಒಪ್ಪಿಕೊಳ್ಳಲಿ ಮಾನ್ಯ ಕೃಷ್ಣನ್ ಬೇಕಾದರೆ ಇದನ್ನು ಮೂವ್ ಮಾಡಲಿ, ಎಂದು ಹೇಳುತ್ತೇನೆ. ತಪ್ಪು ಮಾಡಿರುವವರು, ತಪ್ಪು ಮಾಡಿದ್ದೇನೆಂದು ಒಪ್ಪಿಕೊಂಡರೆ ಅದು ಅವರ ದೊಡ್ಡಸ್ತಿಕೆಯನ್ನು ತೋರಿಸುತ್ತದೆ. ಇದರಿಂದ ಅವರಿಗೇನೂ ಅವಮಾನ ಆಗುವುದಿಲ್ಲ. ಕೋಪದಿಂದ ನಾನೇನೋ ಏನೋ ಒಂದು ಮಾತು ಹೇಳಬಹುದು. ಆದರೆ ಅಡ್ಯಂತಾಯರವರು ಈ ರೀತಿ ಮಾಡಿದ್ದು ತಪ್ಪಾಯಿತು ಎಂದು ಹೇಳಿದ್ದರೆ, ನಿಜವಾಗಿಯೂ ಈ ಸಮಸ್ಯೆ ಬಗೆಹರಿಯುತ್ತಿತ್ತು. ಆದರೆ ಅವರೂ ಪಟ್ಟುಹಿಡಿದಿದ್ದಾರೆ ನಾನು ಹಿಡಿದ ಮೊಲಕ್ಕೆ ಮೂರು ಕಾಲು ಎಂದು ಹೇಳುತ್ತಿದ್ದಾರೆ. ಅದನ್ನು ನಾನು ಒಪ್ಪುವುದಿಲ್ಲ. ಇದೇನೂ ಬಗೆಹರಿಯದ ಸಮಸ್ಯೆ ಅಲ್ಲ. ಆದರೆ ಸಮಸ್ಯೆ ಬಹಳ ಬಿಗಡಾಯಿಸಿದೆ. ಉಭಯ ಪಕ್ಷಗಳವರೂ ಈಲ್ಡ್ ಆಗಬೇಕು, ದಾರಿಗೆ ಬರಬೇಕು. ಈ ಸದನ ಸರಿಯಾಗಿ ನಡೆಯುವಂತಾಗಬೇಕು. ನಿನ್ನೆ ೯೦೦ ಕೋಟಿ ರೂಪಾಯಿಗಳ ಬೇಡಿಕೆಯನ್ನು ಎರಡು ನಿಮಿಷದಲ್ಲಿ ಪಾಸ್ ಮಾಡಲಾಯಿತು. ಮಾನ್ಯ ಬಸವಣ್ಣಪ್ಪ, ಕೃಷ್ಣಾರೆಡ್ಡಿ ಮತ್ತು ಬಸವರಾಜ ಪಾಟೀಲ್ ಅನ್ವರಿ ಈ ಸಚಿವರುಗಳು ನಮಗೆ ತಿಳಿಸದೇ ತಮ್ಮ ಬೇಡಿಕೆಗಳನ್ನು ಪ್ರಿಪೋನ್ ಮಾಡಿದ್ದಾರೆ ಎಂದು ಹೇಳಿ, ತಮಗೆ ನಾನು ಪ್ರಿವಿಲೇಜ್ ಮೋಷನ್ ಕೂಡ ಕಳಂಹಿಸಿಕೊಟ್ಟಿದ್ದೇನೆ. ಈ ಒಂದು ಅನ್ಯಾಯ ನಡೆಯಬಾರದು. ಈ ರೀತಿ ನಡೆಯುವ ದಾರಿ ಸರಿಯಲ್ಲ. ಉಭಯ ಪಾರ್ಟಿಗಳೂ ಸಹ ಒಪ್ಪಂದಕ್ಕೆ ಬಾರದೇ ಇರುವುದಕ್ಕೆ ಇದನ್ನು ನಾನಂ ಪ್ರತಿಭಟಿಸುತ್ತೇನೆ.

ಶ್ರೀ ಬಿ. ಎಸ್. ಯೆಡಿಯೂರಪ್ಪ (ಶಿರಾಳಕೊಪ್ಪ).—ಮಾನ್ಯ ಅಧ್ಯಕ್ಷರೇ, ಎರಡೂ ಪಕ್ಷದವರೂ ಇದನ್ನು ಪ್ರತಿಷ್ಠೆ ಪ್ರಶ್ನೆ ಮಾಡಿಕೊಂಡಿದ್ದಾರೆ. ಮಾನ್ಯ ಅಡ್ಯಂತಾಯ ಸಸ್ಪೆನ್‌ಷನ್ ರಿವೋಕ್ ಮಾಡಿದರೆ, ಅವರು ಈ ಸದನಕ್ಕೆ ಬಂದು ಕ್ಷಮಾಪಣೆ ಕೇಳುವುದರಲ್ಲಿ ಏನೂ ತಪ್ಪಿಲ್ಲ ಅವರು ಕೇಳಬಹುದು. ಆದರೆ ಅವರನ್ನು ಸಸ್ಪೆನ್‌ಷನ್‌ನಲ್ಲಿ ಹೊರಗಡೆ ಇಟ್ಟು ತಪ್ಪಾಗಿದೆ ಎಂದು ಕೇಳುವುದಕ್ಕೆ ಆಗದಿರುವಹಾಗೆ ಮಾಡಿದ್ದೀರಿ. ಬಹಳ ಸಾರಿ ಹಿಂದೆ ವಿರೋಧಪಕ್ಷದವರದು ತಪ್ಪು ಎಂದು ಸ್ಪೀಕರ್‌ಗೆ ಆಡಳಿತ ಪಕ್ಷದವರಿಗೆ ಅನಿಸಿದರೆ, ಇಲ್ಲಿದ್ದಂತಹ ವಿರೋಧ ಪಕ್ಷದ ಪ್ರತಿನಿಧಿಗಳು ಯಾರಾದರೂ ಅವರ ಪರವಾಗಿ ನಿಂತುಕೊಂಡು ಆ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುತ್ತೇವೆ, ಇದನ್ನು ಬಗೆಹರಿಸೋಣ ಎಂದು ಹೇಳಿ ಅನೇಕ ಸಂದರ್ಭದಲ್ಲಿ ಸಮಸ್ಯೆಗಳನ್ನು ಬಗೆಹರಿಸಿರುವುದೂ ಉಂಟು. ಈಗ ಜಿಲ್ಲಾ ಪರಿಷತ್ ಮಂಡಲ್ ಪಂಚಾಯತ್ ಚುನಾವಣೆಗಳು ಆಗಿವೆ. ನಾಳೆ ದಿವಸ ಅಲ್ಲಿ ನಡೆಯುವ ಸಭೆಗಳಲ್ಲಿ ಪೋಗಿ ಭಾಗವಹಿಸುತ್ತೇವೆ. ಈ ರೀತಿಯ ಒಂದು ಆದರ್ಶವನ್ನು ನಾವು ಹಾಕಿಕೊಟ್ಟರೆ ನಾಳೆ ಆ ಸಭೆಗಳು ಯಾವರೀತಿ ನಡೆಯಬೇಕು. ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅನೇಕ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಬಗೆಹರಿಸಲು ಅವರು ಪ್ರಯತ್ನ ಮಾಡುತ್ತಿರುವುದು ನಿಜವಾದರೆ, ಈ ಸದನದೊಳಗೆ ಆಗಿರತಕ್ಕಂಥ ಈ ಸಣ್ಣ ಸಮಸ್ಯೆಯನ್ನು ಸುಲಭವಾಗಿಯೇ ಬಗೆಹರಿಸಬಹುದಾಗಿತ್ತು. ಯಾವಾಗಲೂ ಕ್ಷಮಿಸಿದಂಥವರು ದೊಡ್ಡವರಾಗುತ್ತಾರೆ. ಮಾನ್ಯ ಮುಖ್ಯಮಂತ್ರಿಗಳೇ ಒಂದು ರೆಸುಲ್ಯೂಷನ್ ಮೂವ್ ಮಾಡಿ ಅಡ್ಯಂತಾಯ ಅವರ ಸಸ್ಪೆನ್‌ಷನ್ ರಿವೋಕ್ ಮಾಡಿದರೆ ವಿರೋಧಪಕ್ಷದವರು ಫೀಲ್ ಮಾಡಿಕೊಳ್ಳುತ್ತಾರೆ. ನಮ್ಮದು ತಪ್ಪಾಗಿದೆ ಎಂದು ಭಾವಿಸಿಕೊಳ್ಳುತ್ತಾರೆ. ಇದು ೨೨೫ ಜನ ಸದಸ್ಯರ ಪ್ರಶ್ನೆ ಅಲ್ಲ ಇದು ರಾಜ್ಯದ ಜನತೆಯ ಸಮಸ್ಯೆ. ಬಜೆಟ್ ಮಂಡನೆ ಮಾಡತಕ್ಕ ಸಂದರ್ಭದಲ್ಲಿ ಲೋಪದೋಷಗಳು ಆಗಿವೆ. ಇದನ್ನು ಸರ್ಕಾರದ ಗಮನಕ್ಕೆ ತಂದು ಈ ರೀತಿ ಆಗಬಾರದೆಂದು ಹೇಳುತ್ತೇನೆ. ಈ ರೀತಿ ಆದರೆ ಸರ್ಕಾರ ಯಾವರೀತಿ ಬೇಕಾದರೂ ಅಧಿಕಾರವನ್ನು ನಡೆಸುವುದಕ್ಕೆ ಕಾರಣವಾಗುತ್ತದೆ. ಕೃಷ್ಣ ಸಂಧಾನ ಮುರಿದುಬಿತ್ತು ಎಂದು ಹೇಳುತ್ತಿದ್ದಾರೆ. ಮುರಿದು ಬಿದ್ದಿರಬಹುದು. ಅವೊತ್ತಿನ ಪರಿಸ್ಥಿತಿಗೆ ಇದನ್ನೂ ಹೋಲಿಸುವುದು ಬೇಡ. ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು. ರಾಜ್ಯದ ಜನತೆಯ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ದೃಷ್ಟಿಯಿಂದ, ಈ ಸಣ್ಣ ವಿಚಾರವನ್ನು ಅತ್ಯಂತ ದೊಡ್ಡ ವಿಚಾರಗಳಿಗೆ ಹೋಲಿಸಿಕೊಳ್ಳುವುದು ಸರಿಯಿಲ್ಲ. ನಾನು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಅಡ್ಯಂತಾಯ ಅವರ ಸಸ್ಪೆನ್‌ಷನ್ ರಿವೋಕ್ ಮಾಡಿದರೆ. ಅವರು ಇಲ್ಲಿ ಬಂದು ಅಪಾಲಜಿ ಕೇಳುತ್ತಾರೆ.

ಅವರು ಪತ್ರಿಕೆಗಳಿಗೆ ಹೇಳಿಕೆ ಕೊಡುವುದಕ್ಕೆ ಹೋಗಬಾರದಿತ್ತು. ಮಾನ್ಯ ದೇವೇಗೌಡರು ಮತ್ತು ಮಾನ್ಯ ಬೊಮ್ಮಾಯಿಯವರೂ ಸಹ ಇದರ ಬಗ್ಗೆ ಹೊರಗಡೆ ಚರ್ಚೆ ಮಾಡಬೇಕಾದ ಅಗತ್ಯ ಇರಲಿಲ್ಲ. ಎರಡೂ ಕಡೆ ತಪ್ಪಾಗಿದೆ. ಮಾನ್ಯ ಬೊಮ್ಮಾಯಿಯವರು ಅಪಾಲಜಿ ಕೇಳಲಿ ಎಂದು ಹೇಳುವುದಕ್ಕೆ ಆಗುತ್ತದೆಯೇ ? ದೀರ್ಘವಾಗಿ ಇದನ್ನು ಎಳೆದುಕೊಂಡು ಹೋಗುವುದರಿಂದ, ಸಮಸ್ಯೆ ಬಗೆಹರಿಯುವುದಿಲ್ಲ. ನಮ್ಮ ಸ್ನೇಹಿತರು ಹೇಳಿದಹಾಗೆ ಪ್ರತಿಯೊಂದು ನಿಮಿಷಕ್ಕೆ ೧೦-೧೫ ಸಾವಿರ ರೂಪಾಯಿಗಳು ಖರ್ಚಾಗುತ್ತಿದೆ. ಅದೇನೇನು ವಿಷಯ ಇದೆ, ಎಲ್ಲವನ್ನೂ ಒಂದೇಸಲ ಇಟ್ಟುಕೊಂಡು ಮುಗಿಸಿಬಿಡಿ. ನಾವು ನಮ್ಮ ನಮ್ಮ ಕ್ಷೇತ್ರಗಳಿಗಾದರೂ ಹೋಗುತ್ತೇವೆ. ಈ ರೀತಿ ಪ್ರತಿನಿತ್ಯ ಇದನ್ನು ಮುಂದೂ ಪರಿಸಿಕೊಂಡು ಹೋಗುವುದು ಸರಿಯಲ್ಲ. ಮುಖ್ಯಮಂತ್ರಿಗಳು ಸೋಮವಾರ ಬರುತ್ತಾರೆ, ಕೃಷ್ಣನ್‌ರವರು ಸಲಹೆ ಕೊಡುತ್ತಾರೆ, ನಾವೆಲ್ಲಾ ಸೇರಿ ಒಪ್ಪಿಸಿದ್ದೇವೆ ಎಂಬ ಮಾತನ್ನು ಆಡಳಿತ ಪಕ್ಷದ ಮುಖಂಡರು ಹೇಳಿದ್ದಾರೆ. ಆದರೆ ಪತ್ರಿಕೆಯಲ್ಲಿ ಹೇಳಿಕೆ ಬಂದಿದೆ ಎಂದು ನೆಪ ಮಾಡಿಕೊಂಡು ಈ ರೀತಿ ಮಾಡುವುದು ಸರಿಯಲ್ಲ. ನಾಳೆದಿವಸ ಪತ್ರಿಕೆಯಲ್ಲಿ ಇನ್ನೊಂದು ಹೇಳಿಕೆ ಬರಬಹುದು. ಹಾಗಾದರೆ ಇದೇರೀತಿ ಸದನವನ್ನು ಮುಂದುವರಿಸಿಕೊಂಡು ಹೋಗುತ್ತೀರಾ ? ಇದು ಪ್ರಜಾ ಪ್ರಭುತ್ವದ ಲಕ್ಷಣವೇ ? ಮುಖ್ಯ ಮಂತ್ರಿಗಳು ಇದನ್ನು ಅಪೇಕ್ಷಿಪಡುತ್ತಾರೆಯೇ ? ಜನ ಇದರ ಬಗ್ಗೆ ಖಂಡಿತವಾಗಿಯೂ ನಿಮ್ಮನ್ನು ಕ್ಷಮಿಸುವುದಿಲ್ಲ. ತಾವು ದೊಡ್ಡ ಮನಸ್ಸು ಮಾಡಿ, ಆಡ್ಜಂತಾಯ ಸಸ್ಪೆನ್‌ಷನ್ ರಿವೋಕ್ ಮಾಡಿ. ತಮ್ಮ ಕಾಲದಲ್ಲಿ ಈ ರೀತಿ ಸದನ ನಡೆಯುವುದಕ್ಕೆ ಬಿಡಬೇಡಿ. ಬಿಗಿಯಾದಂಥ ತೀರ್ಮಾನಕ್ಕೆ ನೀವು ಬರಬೇಕಾಗುತ್ತದೆ. ಹೀಗೆ ಮುಂದುವರಿಸುವುದಕ್ಕೆ ಬಿಡಬೇಡಿ. ನಾನುನಿಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಜನತೆ ಕೊಟ್ಟಂಥ ತೆರಿಗೆ ಹಣವನ್ನು ಈ ರೀತಿ ವ್ಯರ್ಥ ಮಾಡುವುದಕ್ಕೆ ನಮಗೆ ಇಷ್ಟ ಇಲ್ಲ.

(ಗೊಂದಲ)

ನಾಮಿನೇಷನ್ ಬಗ್ಗೆ ಸಹ ಕಾಂಗ್ರೆಸ್ (ಐ) ಸದಸ್ಯರು ಪ್ರೆಸ್ ಮಾಡುತ್ತಿದ್ದಾರೆ. ಇದರ ಬಗ್ಗೆ ಸಹ ತಾವು ಭರವಸೆ ಕೊಡಬೇಕು. ನಾಮಿನೇಷನ್ ಮಾಡುತ್ತೇವೆ, ಆದರೆ ಅವರಿಗೆ ವೋಟಿಂಗ್ ಪವರ್ಸ್ ಕೊಡುವುದಿಲ್ಲವೆಂಬ ಒಂದು ಮಾತನ್ನು ಹೇಳಿ ಈ ಸಮಸ್ಯೆಯನ್ನು ಬಗೆಹರಿಸಿಬಿಡಿ.

(ಗೊಂದಲ)

ಶ್ರೀ ಬಿ. ಎಸ್. ಯೆಡಿಯೂರಪ್ಪ.—ಮಾಜಿ ಅರಣ್ಯ ಸಚಿವರು ಏತಕ್ಕೆ ಇಷ್ಟು ಜೋರಾಗಿ ಮಾತನಾಡುತ್ತಿದ್ದಾರೆ. ಅವರು ಏತಕ್ಕೆ ಇಷ್ಟು ಕೋಪ ಮಾಡಿಕೊಳ್ಳುತ್ತಿದ್ದಾರೆ ನಮ್ಮದೇವಂ ಪ್ರಾರ್ಥನೆ ಎಂದರೆ, ನನ್ನದೇನು ಸಲಹೆ ಎಂದರೆ, ಆಡ್ಜಂತಾಯರವರು ಏನು ನಡೆದುಕೊಂಡರಂ, ಅದರ ಜೊತೆಗೇ, ವಿರೋಧ ಪಕ್ಷದವರು ಇಷ್ಟೊಂದು ಬಿಗಿಯಾವ ನಿಲುವು ತಾಳಬೇಕಾದರೆ ಇದರಲ್ಲಿ ನಾಮಿನೇಷನ್ ಪ್ರಶ್ನೆಯೂ ಸಹ ಅಡಕವಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ನೀವು ನಾಮಿನೇಷನ್ ಮಾಡಿದರೆ, ಹಿಂದುಳಿದ ಜನರು ಬರಬಹುದು ಬಡವರು ಬರಬಹುದು. ಇದರಲ್ಲಿ ಪಾರ್ಟಿಸಿಪೇಟ್ ಮಾಡಬಹುದು. ಅವರು ಆ ರೀತಿ ಇದರಲ್ಲಿ ಪಾರ್ಟಿಸಿಪೇಟ್ ಮಾಡಬೇಕೇ ಎಂದರೆ, ಸನಗನ್ನಿಸುತ್ತದೆ, ಒಂದೇ ಒಂದು ಶಬ್ದದಲ್ಲಿ ಇದು ತೀರ್ಮಾನವಾಗುತ್ತದೆ. ನಾಮಿನೇಷನ್ ಮಾಡುತ್ತೇನೆ, ಆದರೆ ಇವರಿಗೆ ಓಟಿಂಗ್ ಪವರ್ಸ್ ಕೊಡುವುದಿಲ್ಲ ಎಂದು ಹೇಳಿಬಿಡಿ. ಆಗ ಒಂದು ನಿಮಿಷಕ್ಕೆ ಈ ಸಮಸ್ಯೆ ಬಗೆಹರಿಯುತ್ತದೆ. ಇದರ ಬಗ್ಗೆ ನನಗೆ ವಿಶ್ವಾಸ ಇದೆ, ನೀವು ಈ ರೀತಿ ಹೇಳಿದರೆ ಮಾನ್ಯ ವಿರೋಧ ಪಕ್ಷದ ನಾಯಕಿಯಂರಂ ಆಡ್ಜಂತಾಯ ಅವರ ಬಗ್ಗೆ ಕ್ಷಮಾಪಣೆ ಕೇಳುತ್ತಾರೆ ನಾಮಿನೇಷನ್ ಮಾಡುತ್ತೇವೆ, ಆದರೆ ಅವರಿಗೆ ಓಟಿಂಗ್ ಪವರ್ಸ್ ಕೊಡುವುದಿಲ್ಲ ಎಂದು ಹೇಳುವುದಕ್ಕೆ ತಾವು ಮುಂದೆ ಬಂದರೆ ಸಮಸ್ಯೆ ಬಗೆಹರಿಯುತ್ತದೆ.

ಶ್ರೀ ಬಿ.ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ನಾನು ನಿಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಯೆಡಿಯೂರಪ್ಪನವರು ನಾಮಿನೇಷನ್ ಬಗ್ಗೆ ಹೇಳಿದರು. ಇದರ ಬಗ್ಗೆ ಅಡ್‌ಜರ್ನ್‌ಮೆಂಟ್ ಮೋಷನ್ ತರುವ ಸಂದರ್ಭದಲ್ಲಿ

ನಾನು ಬಂಗಾರಪ್ಪನವರನ್ನು ಕೇಳಿದೆ, ಕೊಡಗು ಮಂಡ್ಯ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಿಮ್ಮ ಪಕ್ಷ ಮೆಜಾರಿಟಿ ಇದೆ. ಅಲ್ಲಿ ನಾಮಕರಣ ನೀವು ಮಾಡುತ್ತೀರಾ ಎಂದು ಕೇಳಿದ ಸಂದರ್ಭದಲ್ಲಿ ನಾವು ಮಾಡುವುದಿಲ್ಲ ಎಂದು ಹೇಳಿದರು. ಪ್ರತಿಪಕ್ಷದ ನಾಯಕಿಯರೂ ಸಹ ಇದೇ ರೀತಿ ಮಾತನಾಡಿದರು. ಕೊನೆಗೆ ಇದರ ಬಗ್ಗೆ ಮಾತನಾಡುತ್ತಾ ಇದು ಪಕ್ಷಕ್ಕೆ ಬಿಟ್ಟ ವಿಚಾರ ಎಂದು ಹೇಳಿದರು. ಸನ್ಮಾನ್ಯ ಯೆಡಿಯೂರಪ್ಪನವರು ನಾಮಕರಣ ಮಾಡಲಿ ಆದರೆ ಓಟಿಂಗ್ ಪವರ್ ಕೊಡಬೇಡಿ ಎಂದು ಹೇಳುತ್ತಿದ್ದಾರೆ. ಅವರಿಗೆ ಓಟಿಂಗ್ ರೈಟ್ ಇರಕೂಡದು ಎಂದು ಹೇಳಿದ್ದಾರೆ. ಆದರೆ ಕೊಡಗು ಜಿಲ್ಲೆಯಲ್ಲಿ ಜಿಲ್ಲಾಪರಿಷತ್ ಕಾಂಗ್ರೆಸ್-ಐ ಕೈಯಲ್ಲಿ ಇದೆ. ಅವರು ಅಲ್ಲಿ ವೋಟಿಂಗ್ ನೋಟೀಸನ್ನು ತರಾತುರಿಯಲ್ಲಿ ಕೊಟ್ಟಿದ್ದಾರೆ. ಇವರು ಹೇಳಿರುವುದು ಒಂದು, ಮಾಡುವುದು ಒಂದು. ಈ ನೋಟೀಸ್‌ನಲ್ಲಿ ಕಾರ್ಯಸೂಚಿಯನ್ನು ನೋಡಿದರೆ ಇದು ಗೊತ್ತಾಗುತ್ತದೆ. ಸೆಕ್ಷನ್ ೫(೩)ರ ಪ್ರಕಾರ ಹಿಂದುಳಿದವರ್ಗಗಳ ಪ್ರತಿನಿಧಿಗಳನ್ನು ಮಂಡಲ್ ಪಂಚಾಯತ್‌ಗೆ ನಾಮಕರಣ ಮಾಡುವ ವಿಚಾರವನ್ನು ಕಾರ್ಯಸೂಚಿಯಲ್ಲಿ ವ್ಯಕ್ತಪಡಿಸಿದ್ದಾರೆ. ಇವರುಗಳ ನಿಲುವು ಏನೆಂಬುದೇ ಅರ್ಥವಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಪಂಪಾಪತಿಯವರೇ ನೀವು ಒಳ್ಳೆಯ ಸಲಹೆ ಕೊಟ್ಟುಬಿಡಿ. ಅವರ ಮನಸ್ಸು, ಇವರ ಮನಸ್ಸು ಸರಿಯಾಗಿ ಹೋಗಬೇಕು, ಇಬ್ಬರೂ ರಾಜಿಗೆ ಬಂದಿರಬೇಕು ಆ ರೀತಿ ಹೇಳಿಬಿಡಿ.

ಶ್ರೀ ಪಂಪಾಪತಿ.—ಅನೇಕ ಸಂದರ್ಭಗಳಲ್ಲಿ ಪತ್ರಿಕೆಗಳಲ್ಲಿ ಬಂದುದೆಲ್ಲಾ ನಿಜವೇ ಎಂದು ಕೇಳಿದ್ದೂ ಉಂಟು. ಮಾನ್ಯ ಮುಖ್ಯಮಂತ್ರಿಗಳೇ ಅನೇಕ ಸಂದರ್ಭಗಳಲ್ಲಿ ಪತ್ರಿಕೆಗಳಲ್ಲಿ ಬಂದುದೆಲ್ಲಾ ನಿಜವೇ ಎಂದು ಇದೇ ಸಭೆಯಲ್ಲಿ ಕೇಳಿದುದೂ ಉಂಟು. ಆದುದರಿಂದ ಪತ್ರಿಕೆಯಲ್ಲಿ ಏನು ಬಂದಿದೆ ಎಂದು ಲೆಕ್ಕಕ್ಕೆ ತೆಗೆದುಕೊಳ್ಳುವುದು ಬೇಡ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಪಂಪಾಪತಿಯವರೇ, ಕಾಂಪ್ರೋಮರ್ಸ್ ಮಾಡಬೇಡಿ. ಇಬ್ಬರೂ ರಾಜಿ ಆಗಬೇಕು, ಆ ರೀತಿ ಏನಾದರೂ ಹೇಳಿ.

ಶ್ರೀ ಪಂಪಾಪತಿ.—ಇದರಲ್ಲಿ ಏನು ಪ್ರತಿಷ್ಠೆ ಇದೆ.

(ಗೊಂದಲ)

ಶ್ರೀ ಪಂಪಾಪತಿ.—ನೀವು ನಾಮಿನೇಷನ್ ಮಾಡುತ್ತೀರಿ. ಅದು ನನಗೆ ಗೊತ್ತು ಅದರ ಬಗ್ಗೆ ನಾನು ಹೇಳಲಿಲ್ಲ.

ಅಧ್ಯಕ್ಷರು.—ಇಬ್ಬರ ಮನಸ್ಸೂ ಒಂದಾಗಬೇಕು, ಇಬ್ಬರೂ ರಾಜೀಯಾಗಬೇಕು. ಅಂತಹ ಸಲಹೆ ಹೇಳಿ ಎಂದು ಹೇಳಿದ್ದೇನೆ, ಅದನ್ನು ಬಿಟ್ಟು ಏನೇನೋ ಹೇಳುತ್ತೀರಿ. ನಿಮಗೆ ಇದನ್ನು ಬೆಳೆಸುವುದು ಬೇಕೋ, ಮುಗಿಸುವುದು ಬೇಕೋ ಹೇಳಿ. ಇಬ್ಬರ ಮನಸ್ಸೂ ಒಂದಾಗುವಂತಹ ಒಂದು ಸಲಹೆ ಹೇಳಿ, ಒಳ್ಳೆಯ ಸಲಹೆ ಕೊಡಿ, ಇಂತಹ ಪ್ರಸಂಗ ಬಂದಾಗ ನಾನು ಏನು ಮಾಡಬೇಕು ಅದನ್ನು ಹೇಳಿ, ಏನೇನೋ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಅವರು ಮಾತನಾಡುವುದಕ್ಕೆ ಬಿಡದೇ ಇದ್ದರೆ ನಾನು ಹೇಗೆ ಮಾತನಾಡಲಿ.

ಅಧ್ಯಕ್ಷರು.—ಸಮಸ್ಯೆ ಬಗೆಹರಿಯಬೇಕು ಎಂಬುದಕ್ಕೆ ಏನು ಮಾಡಬೇಕು ಹೇಳಿ.

ಶ್ರೀ ಪಂಪಾಪತಿ.—ಎರಡೂ ಕಡೆ ಬಹಳ ಅನುಭವಸ್ಥರು ಇದ್ದಾರೆ. ಈ ಅನುಭವಸ್ಥರು ಸೇರಿ ಕೊಂಡು ಇದನ್ನು ತೀರ್ಮಾನ ಮಾಡುವುದಕ್ಕೆ ಆಗದಿರುವಂತಹ ಪ್ರಶ್ನೆ ಏನೂ ಅಲ್ಲ. ಇದು ನಿಮ್ಮೊಳಗೇ ಇರತಕ್ಕಂಥ ಪ್ರಶ್ನೆ. ಈಗ ಅಡ್ಯಂತಾಯರವರು ಏನೋ ಕಾಲನ್ನು ಎತ್ತಿದರು. ಕೆರೆದು ಕೊಳ್ಳುವುದಕ್ಕೆ ಕಾಲನ್ನು ಎತ್ತಿರಬಹುದು. ಅದೇ ಒಂದು ದೊಡ್ಡ ಸಮಸ್ಯೆ ಎಂದು ತಿಳಿದುಕೊಂಡು ಅವರನ್ನು ಹೊರಗಡೆ ಹಾಕಿದ್ದೀರಿ. ಇಂತಹ ಒಂದು ದೊಡ್ಡ ಸಮಸ್ಯೆಯನ್ನು ತಾವು ಇಟ್ಟುಕೊಂಡು

ಅಧ್ಯಕ್ಷರು.—ಸಮಸ್ಯೆಯನ್ನು ಬಗೆಹರಿಸಲು ತಾವು ಏನು ಸಲಹೆ ಕೊಡುತ್ತೀರಿ ಹೇಳಿ.

ಶ್ರೀ ಪಂಪಾಪತಿ.—ನಾವೇನು ಮಾಡುವುದಕ್ಕೆ ಆಗುವುದಿಲ್ಲ.....

ಅಧ್ಯಕ್ಷರು.—ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನು ಮಾಡಬೇಕು ಅದನ್ನು ಹೇಳಿ. ತಾವು ಹಿರಿಯ ಅನುಭವಿ ಯುಜಮಾನರು ಇದ್ದೀರಿ. ಸಮಸ್ಯೆಯನ್ನು ಬಗೆಹರಿಸುವ ಸಲಹೆ ಕೊಟ್ಟರೆ ಮಾನ್ಯ ಮುಖ್ಯಮಂತ್ರಿಗಳು ಸಹ ಇಲ್ಲಿ ಇದ್ದಾರೆ.

ಶ್ರೀ ಪಂಪಾಪತಿ.—ಒಂದು ವಾರದಿಂದ ಅವರು ಇಲ್ಲಿ ಕುಳಿತುಕೊಂಡು.....

ಅಧ್ಯಕ್ಷರು.—ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಲಹೆ ಹೇಳಿ, ಅದು ಬಿಟ್ಟು ಬೇರೇನು ಹೇಳುವುದು ಬೇಡ.

(ಗೊಂದಲ)

ಶ್ರೀ ಪಂಪಾಪತಿ.—ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಬೇಕು. ಈ ರಾಜ್ಯದ ಜನರ ಸಮಸ್ಯೆಗಳನ್ನು ಚರ್ಚೆ ಮಾಡತಕ್ಕಂಥ ಕಾಲದಲ್ಲಿ ವಿರೋಧಪಕ್ಷಗಳು ಇಲ್ಲದೆ ಕೆಲಸ ಮಾಡುವುದು ಸರಿಯಲ್ಲ.....

(ಗೊಂದಲ)

ಅಧ್ಯಕ್ಷರು.—ಮತ್ತೆ ತಾವು ಇದನ್ನು ಕೆದಕುವುದಕ್ಕೆ ಹೋಗಬೇಡಿ. ಸಮಸ್ಯೆ ಬಗೆಹರಿಸಲು ಸಲಹೆ ಹೇಳಿ.

(ಗೊಂದಲ)

ಶ್ರೀ ಪಂಪಾಪತಿ.—ಮೊನ್ನೆ ೫ ನಿಮಿಷದಲ್ಲಿ ೬೨೦ ಕೋಟಿ ರೂಪಾಯಿಗಳ ಬೇಡಿಕೆಗಳನ್ನು ಪಾಸು ಮಾಡಿಕೊಂಡು ಹೋದರು. ಆ ಬಗ್ಗೆ ಸದಸ್ಯರು ಚರ್ಚೆ ಮಾಡಲಿಲ್ಲ. ಅವರ ಸಲಹೆ ಸೂಚನೆಗಳನ್ನು ಕೊಡಲಿಲ್ಲ.....

(ಗೊಂದಲ)

ಅಧ್ಯಕ್ಷರು.—ತಾವು ಒಳ್ಳೆಯ ಸಲಹೆ ಕೊಡಿ. ಇಲ್ಲದಿದ್ದರೆ ಕುಳಿತುಕೊಳ್ಳಿ.

ಶ್ರೀ ಪಂಪಾಪತಿ.—ಸ್ವಾಮಿ ಇವತ್ತು ಮಾನ್ಯ ಮುಖ್ಯಮಂತ್ರಿಗಳ ಬೇಡಿಕೆಗಳು ಸದನದ ಮುಂದೆ ಇವೆ. ಆ ಬಗ್ಗೆ ಸದಸ್ಯರು ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ಸಭಾನಾಯಕರು ಮತ್ತು ವಿರೋಧಪಕ್ಷದ ನಾಯಕರು ಒಟ್ಟುಗೂಡಿ ಮಾತನಾಡಿದರೆ ಸಮಸ್ಯೆಯನ್ನು ಬಗೆಹರಿಸಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಇಬ್ಬರನ್ನು ಒಂದು ರೂಮ್‌ನಲ್ಲಿ ಸೇರಿಸಿ ಬೀಗ ಹಾಕಿ ಸಮಸ್ಯೆಯನ್ನು ಬಗೆಹರಿಸುವ ತನಕ ಬಿಡುವುದಿಲ್ಲವೆಂದು ಹೇಳಬೇಕು.....

ಅಧ್ಯಕ್ಷರು.—ಮಾನ್ಯ ಪಂಪಾಪತಿಯವರೇ ತಾವು ಕುಳಿತುಕೊಳ್ಳಿ. ಸಭಾನಾಯಕರು ಏನು ಹೇಳುತ್ತಾರೋ ಕೇಳೋಣ.

(ಗೊಂದಲ)

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ ...

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ತಾವೆಲ್ಲಾ ದಯಮಾಡಿ ತಮ್ಮ ತಮ್ಮ ಜಾಗಗಳಿಗೆ ಹೋಗಿ. ತಮಗೆ ಮಾತನಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ನಾನೇನು ಡಿಮ್ಯಾಂಡ್‌ಗಳನ್ನು ಓಟಿಗೆ ಈಗ ಹಾಕುವುದಿಲ್ಲ. ಚರ್ಚೆ ಮಾಡುವುದಕ್ಕೆ ತಾವು ಸಿದ್ಧರಿದ್ದರೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ತಾವು ತಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ. ಇಲ್ಲದಿದ್ದರೆ ತಾವೇನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಜಿ. ವಿಜಯರವರು ಒಂದು ಆರೋಪವನ್ನು ಸದನದಲ್ಲಿ ಮಾಡಿದರು.

(ಗೊಂದಲ)

ಅಧ್ಯಕ್ಷರು.—ಸಮಸ್ಯೆಯನ್ನು ಬಗೆಹರಿಸಿ. ಬೇರೆ ವಿಷಯ ಈಗ ಬೇಡ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಸಭೆಗೆ ತಪ್ಪು ಅಭಿಪ್ರಾಯ ಬರುವಂತೆ ಹೇಳಿದ್ದಾರೆ.

ಅಧ್ಯಕ್ಷರು.—ಬೇಡ ತಾವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್,—ಇಲ್ಲಿ ಆ ಬಗ್ಗೆ ಏನಿದೆ ಎಂದರೆ ಒಬ್ಬ ಉಪಕಾರ್ಯದರ್ಶಿ ಒಂದು ಪತ್ರಬರೆದಿದ್ದಾರೆ.

(ಗೊಂದಲ)

ಅಧ್ಯಕ್ಷರು.—ತಮಗೆ ರಾಜಿ ಮಾಡಬೇಕೆಂದಿದೆಯೋ ಇಲ್ಲವೋ...

ಶ್ರೀ ಎಂ. ಎಸ್. ಕೃಷ್ಣನ್.—ರಾಜಿ ಆಗಬೇಕು. ತಮ್ಮ ಬಗ್ಗೆ ನಮಗೆ ಗೌರವವಿದೆ. ಆದರೆ ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸ್ವಲ್ಪ ಅನಾಮಾನಕ್ಕೆ ಆಸ್ಪದವಾಗುವಂತಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದಂಥ ಎಂ. ಎಸ್. ಕೃಷ್ಣನ್‌ರವರು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ತಮಗೆ ರಾಜಿ ಆಗುವ ಬಗ್ಗೆ ಕಾಳಜಿ ಇದೆಯೋ ಇಲ್ಲವೋ ಹೇಳಿ. ಈಗ ಮಾನ್ಯ ಸಭಾನಾಯಕರು ಉತ್ತರ ಹೇಳಲಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣನ್‌ರವರು, ಮಾನ್ಯ ಯೆಡಿಯೂರಪ್ಪನವರು ಮತ್ತು ಮಾನ್ಯ ವೆಂಕಟರಾಮಯ್ಯನವರು ಪುನಃ ಪುನಃ ಮುಖ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಬೇಕೆನ್ನುವ ಮಾತನ್ನು ಹೇಳಿದ್ದಾರೆ. ಮುಖ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆಯೇ ? ಇದು ನನ್ನ ವೈಯಕ್ತಿಕ ಪ್ರಶ್ನೆಯೇ ? ನನ್ನ ವೈಯಕ್ತಿಕ ಪ್ರಶ್ನೆ ಆಗಿದ್ದಿದ್ದರೆ, ಎಷ್ಟು ದೊಡ್ಡ ಮನಸ್ಸು ಮಾಡಬೇಕಾಗಿತ್ತೋ ಅಷ್ಟೂ ದೊಡ್ಡ ಮನಸ್ಸನ್ನು ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಆದರೆ ಅದು ನನ್ನ ವೈಯಕ್ತಿಕ ಪ್ರಶ್ನೆಯಲ್ಲ. ಇದು ಈ ಮನೆಗೆ ಸಂಬಂಧಪಟ್ಟಂತ ವಿಷಯ, ಈ ಮನೆಯ ಗೌರವ, ಪ್ರತಿಷ್ಠೆಗೆ ಸಂಬಂಧಪಟ್ಟಂಥ ಪ್ರಶ್ನೆ. ಈ ಮನೆಯಲ್ಲಿ ಅನುಸರಿಸಬೇಕಾದಂಥ ಶಿಸ್ತಿಗೆ ಸಂಬಂಧಪಟ್ಟಂಥ ಪ್ರಶ್ನೆ. ನಾಮಿನೇಷನ್ ವಿಚಾರದಲ್ಲಿ ಸರ್ಕಾರದ ನಿಲುವನ್ನು ಹೇಳಿದರೆ ಅದು ಸರಿಯಾಗಲಿಕ್ಕಿಲ್ಲ. ಏಕೆಂದರೆ, ಈ ವಿಚಾರ ಹೈಕೋರ್ಟ್ ಮುಂದೆ ಇದೆ. ರಿಟ್ ಆಫ್ ಮ್ಯಾಂಡಮಸ್‌ನ್ನು ವಿಚಾರಣೆಗಾಗಿ ತೆಗೆದು ಕೊಂಡಿದ್ದಾರೆ. ಇವತ್ತೋ ನಾಳೆಯೋ ಅಥವಾ ಇನ್ನು ಎರಡು ಮೂರು ದಿವಸಗಳೊಗೆ ಹೈಕೋರ್ಟಿನ ಒಂದು ನಿರ್ಣಯ ಬರಬಹುದು. ಒಂದು ಮಾತನ್ನು ಇಲ್ಲಿ ಎಲ್ಲಾ ಮಾನ್ಯ ಸದಸ್ಯರಿಗೂ ನೆನಪು ಮಾಡಲಿಕ್ಕೆ ಬಯಸುತ್ತೇನೆ. ಈ ನಾಮಿನೇಷನ್ ವಿಚಾರ ಸರ್ಕಾರ ಮೊದಲು ಮಾಡಿದಂಥ ತೀರ್ಮಾನವಲ್ಲ. ನಾಮಿನೇಷನ್ ಮಾಡಬೇಕೆಂದು ಹೇಳಿ ಇಚ್ಛೆ ಇದ್ದಿದ್ದರೆ, ಈ ಒಂದು ಕಾಯಿದೆ ಇನ್ನೂ ಮಸೂದೆ ರೂಪದಲ್ಲಿ ಇದ್ದಾಗಲೇ ನಾವು ಅದನ್ನು ಸೇರಿಸಬಹುದಾಗಿತ್ತು. ಮಸೂದೆಯಲ್ಲಿ ನಾಮಿನೇಷನ್ ವಿಚಾರವೇ ಇಲ್ಲ. ಅಷ್ಟೇ ಅಲ್ಲ, ಚುನಾವಣೆ ಮುಂಗಿದ ಮೇಲೆ, ಫಲಿತಾಂಶ ಬಂದ ಮೇಲೆ ಅನೇಕ ಟೀಕೆ ಟಿಪ್ಪಣಿಗಳು ಬಂದವು. ರಾಜಕೀಯ ಮುಖಂಡರೂ ಟೀಕೆ ಮಾಡಿದರು. ಜನತಾ ಪಕ್ಷವು ನಿಜವಾಗಿ ಪಡೆದದ್ದು ಹದಿನೈದೇ ಜಿಲ್ಲಾಪರಿಷತ್ತು, ಇನ್ನೂ ಎರಡು ಪರಿಷತ್‌ನ್ನು ಅಥವಾ ಮೂರು ಪರಿಷತ್‌ನ್ನು ಶಾಸಕರ ಮತದಾನದ ಆಧಾರದ ಮೇಲೆ ತಾವು ಕಂಟ್ರೋಲ್‌ನಲ್ಲಿ ತೆಗೆದು ಕೊಂಡಿದ್ದಾರೆಂದು ಹೇಳಿದ್ದೀರಿ. ನಿಮ್ಮ ಮುರವು ಅಷ್ಟು ಕ್ಷಣಿಕವೆಂದು ನಾನು ತಿಳಿದುಕೊಳ್ಳುವುದಿಲ್ಲ. ನೆನಪು ಅಷ್ಟು ಕ್ಷಣಿಕವಲ್ಲ. ಇದರ ಬಗ್ಗೆ ನೆನಪು ಮಾಡತಕ್ಕ ಅಗತ್ಯ ಇದೆಯೇ ? ಮೂಲ ಮಸೂದೆಯಲ್ಲಿ ಶಾಸಕರಿಗೆ ಮತದಾನ ಮಾಡತಕ್ಕ ಹಕ್ಕು ಇತ್ತೋ ? ಶಾಸಕರು ಅಲ್ಲಿ ಸದಸ್ಯರಾಗಿರ ಬೇಕು ನಿಜ. ಮತದಾನದ ಹಕ್ಕನ್ನು ಅವರಿಗೆ ಮೊದಲು ಕೊಟ್ಟಿರಲಿಲ್ಲ. ಅವರ ಗೈಡೆನ್ಸ್ ಅವರಿಗೆ

ಸಂಬಂಧಪಟ್ಟಂಥಹ ಜಿಲ್ಲಾ ಪರಿಷತ್ತಿಗೆ ಇರಬೇಕು, ಅವರ ಮಾರ್ಗದರ್ಶನ ಜಿಲ್ಲಾ ಪರಿಷತ್ತಿಗೆ ಆಗಬೇಕೆಂದು ಅವರಿಗೆ ಗೌರವ ಸ್ಥಾನವನ್ನು ಕೊಟ್ಟಿದ್ದೇವೆ. ಈ ವಿಚಾರದಲ್ಲಿ ತೀರ್ಮಾನವಾದದ್ದು ಸೆಲೆಕ್ಟ್ ಕಮಿಟಿಯಲ್ಲಿ. ಇದರ ಬಗ್ಗೆ ಆಗ್ರಹ ಮಾಡಿದ ಮೇಲೆ ತೀರ್ಮಾನವಾಯಿತು. ಆದುದರಿಂದ ಇವತ್ತು ಚುನಾವಣೆಯಲ್ಲಿ ಫಲಿತಾಂಶ ಒಂದು ರೀತಿಯಲ್ಲಿ ಬಂದ ಮೇಲೆ ಅದರ ಬಗ್ಗೆ ಸರ್ಕಾರದ ಮೇಲೆ ದೋಷಾರೋಪಣೆ ಮಾಡುವುದು ಸರಿಯಲ್ಲ. ಈ ಘಟನೆ ನಡೆದಾಗ ನನ್ನ ಅದೃಷ್ಟವೆಂದು ಕಾಣುತ್ತದೆ ನಾನು ಆ ಸಂದರ್ಭದಲ್ಲಿ ಇರಲಿಲ್ಲ. ಆ ಸಂದರ್ಭದಲ್ಲಿ ಇದ್ದಿದ್ದರೆ, ನಮ್ಮ ಕಡೆಯ ಸದಸ್ಯರಿಗೆ ಎಷ್ಟು ದುಃಖವಾಗಿದೆಯೋ ಅದಕ್ಕೂ ಸಾವಿರ ಪಟ್ಟು ದುಃಖ ನನಗೆ ಆಗುತ್ತಿತ್ತು. ಈ ಮನೆಯಲ್ಲಿ ನಾನು ಬಹಳ ವರ್ಷಗಳಿಂದ ಸದಸ್ಯನಾಗಿದ್ದೇನೆ. ಪ್ಲಾನಿಮೆಂಟಿನ ಸದಸ್ಯನಾಗಿ ಅಲ್ಲಿನ ನಡವಳಿಕೆಗಳನ್ನೂ ನೋಡಿದ್ದೇನೆ, ಈ ವಿಚಾರವನ್ನು, ನಾನು ಬಂದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಉಪ ನಾಯಕರು ಹಾಗೂ ಇನ್ನಿತರ ವಿರೋಧಿ ದಳದಲ್ಲಿರತಕ್ಕಂಥ ಮುಖಂಡರ ಜೊತೆಯಲ್ಲಿ ಚರ್ಚೆ ಮಾಡಿದಾಗ, ನಾನು ಒಂದೇ ಒಂದು ಪ್ರಶ್ನೆಯನ್ನು ಅವರನ್ನು ಕೇಳಿದೆ. ಎರಡೂ ವಿಚಾರದಲ್ಲಿ ಒಂದಕ್ಕೊಂದು ಸಂಬಂಧ ಇಟ್ಟುಕೊಂಡು ಮಾತನಾಡಬೇಕೋ ಅಥವಾ ಒಂದರ ಸಂಬಂಧವನ್ನು ಮತ್ತೊಂದಕ್ಕೆ ತಗಲದಂತೆ ಮಾತನಾಡಬೇಕೋ ಎಂದು ಕೇಳಿದೆ. ಒಂದು ನೀತಿಗೆ ಸಂಬಂಧಪಟ್ಟಂತ ವಿಚಾರ. ಮತ್ತೊಂದು ಶಿಸ್ತಿಗೆ ಮತ್ತು ಈ ಮನೆಯ ಗೌರವಕ್ಕೆ ಸಂಬಂಧಪಟ್ಟಂತಹ ವಿಚಾರ. ಆಗ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಇವೆರಡೂ ವಿಷಯವನ್ನು ಪ್ರತ್ಯೇಕವಾಗಿ ಮಾಡಬಹುದೆಂದು. ಆದರೆ ಇನ್ನಿತರ ಮುಖಂಡರ ಅಭಿಪ್ರಾಯ ಪ್ರತ್ಯೇಕವಾಗಿ ಮಾಡುವುದಕ್ಕೆ ಒಪ್ಪಿಗೆ ಇಲ್ಲ ಎನ್ನತಕ್ಕ ಮಾತನ್ನು ಹೇಳಿದರು.

ಪ್ರತ್ಯೇಕವಾಗಿ ಮಾಡತಕ್ಕಂಥಾದ್ದಕ್ಕೆ ನಮ್ಮ ಒಪ್ಪಿಗೆ ಇಲ್ಲ ಎಂದು ಹೇಳಿದರು. ಈಗ ದೊಡ್ಡ ಮನಸ್ಸು ಮಾಡಬೇಕು. ಆದರೆ ದೊಡ್ಡ ಮನಸ್ಸು ಒಂದು ವ್ಯಕ್ತಿ ಮಾಡಿದರೆ ಆಗುವುದಿಲ್ಲ. ಯಾರು ತಪ್ಪು ಮಾಡಿದ್ದಾರೋ, ಅವರು ಎಲ್ಲದಕ್ಕಿಂತ ಮೊದಲು ದೊಡ್ಡ ಮನಸ್ಸು ಮಾಡಬೇಕು. ನಾನು ಏನಾದರೂ ತಪ್ಪು ಮಾಡಿದ್ದರೆ ನಾನು ತಪ್ಪು ಮಾಡಿದ್ದೇನೆ ಎಂಬ ಅರಿವು ನನ್ನ ತಲೆಗೆ ಬರಬೇಕು, ಆದರೆ ನನ್ನ ಮುಂದಿನ ನಡವಳಿಕೆ ನಾನು ತಪ್ಪು ಮಾಡಿದ್ದನ್ನು ಜಸ್ಟಿಫೈ ಮಾಡಿಕೊಳ್ಳತಕ್ಕಂಥ ರೀತಿಯಲ್ಲಿ ಮತ್ತು ನಾನು ಮಾಡಿದ್ದೇ ಸರಿ ಎಂದು ಹೇಳತಕ್ಕಂಥಾ ರೀತಿಯಲ್ಲಿ, ನನ್ನ ನಡತೆ ಇದ್ದರೆ ಅದು ದೊಡ್ಡ ಮನಸ್ಸು ಆಗುತ್ತದೆಯೇ ?

ಈ ಸಮಯದಲ್ಲಿ ಒಬ್ಬ ಮಹಾನ್ ವ್ಯಕ್ತಿಯ ಬಗ್ಗೆ ಒಂದು ಉದಾಹರಣೆಯನ್ನು ಇಲ್ಲಿ ಹೇಳ ಬಯಸುತ್ತೇನೆ. ಅದು ನಮ್ಮ ದಿವಂಗತ ಪ್ರಧಾನಿಯವರಾದ ಪಂಡಿತ್ ಜವಾಹರಲಾಲ್ ನೆಹರೂರವರ ಕುರಿತಾದುದು. ಡಾ. ಶ್ಯಾಮ್‌ಪ್ರಸಾದ್ ಮುಖರ್ಜಿಯವರು ಲೋಕಸಭೆಯಲ್ಲಿ ಅತೀ ಉನ್ನತ ವ್ಯಕ್ತಿತ್ವ ಇದ್ದಂತಹ ಸದಸ್ಯರು. ಅವರ ವಿಚಾರದಲ್ಲಿ ಪಂಡಿತ್ ಜವಾಹರಲಾಲ್ ನೆಹರೂರವರ ಬಾಯಲ್ಲಿ ಒಂದು ಮಾತು ಬಂತು. ಅಂದರೆ, ಅದು ವ್ಯಕ್ತಿಗತವಾದುದು. ಆ ವಿಚಾರ ಅವರ ಅರಿವಿಗೆ ಬಂದ ತತ್‌ಕ್ಷಣ ಒಂದು ನಿಮಿಷವೂ ಕೂಡ ತಡಮಾಡದೆ ತತ್‌ಕ್ಷಣ ಅವರು ಹೇಳಿದರು. On my second thought, I must say that I am sincerely sorry and I tender unqualified apology to Dr. Shamprasad Mukharjee. ಇಂದು ನಾವುಗಳು ಅವರಿಗಿಂತ ದೊಡ್ಡವರು ಅಲ್ಲ. ಉದಾರ ಮನಸ್ಸು ಮಾಡಬೇಕು. ತಪ್ಪು ಮಾಡಿದವರಿಗೆ ತಪ್ಪು ಮಾಡಿದ್ದೇನೆ ಎಂಬ ಉದಾರ ಮನಸ್ಸು ಇಲ್ಲದಿದ್ದರೆ, ಅದನ್ನು ಕ್ಷಮೆ ಮಾಡತಕ್ಕಂಥಾದ್ದು ನಮಗೂ ಸಾಧ್ಯವಿಲ್ಲ. ನನ್ನ ವೈಯಕ್ತಿಕ ವಿಚಾರ ಇದು ಅಲ್ಲ. ಹಾಗೆಯೇ ಇನ್ನೊಂದು ವಿಚಾರ, ಒಂದು ಪತ್ರಿಕೆಯ ಪ್ರಕಟಣೆ ನೋಡಿದೆ. ಆದರಲ್ಲಿ ಸತ್ಯಕ್ಕೆ ಎಷ್ಟು ದೂರವಾದ ಮಾತನ್ನು ಹೇಳಿದ್ದಾರೆ ಎಂದು ನೋಡಿದರೆ ಗೊತ್ತಾಗುತ್ತದೆ. ಆರೋಪಗಳು ಸತ್ಯಕ್ಕೆ ಸ್ವಲ್ಪಮಟ್ಟಿಗಾದರೂ ಹತ್ತಿರ ಇದ್ದರೆ ಹೌದು ಎನ್ನಬಹುದು. ಆದರೆ ಅವರು ಮಾಡಿದ ಆರೋಪಗಳು ನನಗೆ ನನ್ನ ಕನಸಿನಲ್ಲಿಯೂ ಗೊತ್ತಿರಲಿಲ್ಲ. ಅಥವಾ ಇಂತಹ ವಿಚಾರಗಳು ಸದನದಲ್ಲಿ ಇಂತಹ ದಿವಸ ಬರುತ್ತವೆ, ಇಂತಹವರು ಮಾತನಾಡುತ್ತಾರೆ ಎಂದು ಇತ್ಯಾದಿಯಾಗಿ ನನಗೆ ಗೊತ್ತಿದೆಯೇ ? ಗೊತ್ತಿತ್ತೆ ? ಇಂತಹ ಒಂದು ಕಾನಿಪಿರೆಸಿ ಮಾಡುವುದು ಸರಿಯೇ ? ಇಂತಹ ಆರೋಪಗಳನ್ನು ನನ್ನ ಮೇಲೆ, ನನ್ನ ಪಕ್ಷದ ಮೇಲೆ

ಮಾಡಿದ್ದಾರೆ. ತಾನು ಮಾಡಿದ ವರ್ತನೆ ಬಗ್ಗೆ ಸ್ವಲ್ಪವೂ ವ್ಯಥೆ ಪಡದೆ, ಈ ರೀತಿಯಲ್ಲಿ ತಮ್ಮ ವರ್ತನೆಯನ್ನು ತೋರಿಸಿದರೆ, ಇದಕ್ಕೆ ಯಾವ ದೊಡ್ಡ ಮನಸ್ಸು ಮಾಡಿದರೆ ಸರಿಹೋಗುತ್ತದೆ ಎಂಬುದನ್ನು ಮಾನ್ಯ ಸದಸ್ಯರೇ ಯೋಚನೆ ಮಾಡಬೇಕು.

ಇನ್ನು ನಾಮಿನೇಷನ್ ವಿಚಾರದಲ್ಲಿ ಆ ದಿವಸವೂ ನಾನು ಹೇಳಿದ್ದೇನೆ. ಆ ವಿಚಾರದಲ್ಲಿಯೇ ಚರ್ಚೆ ಮಾಡಲಿಕ್ಕೆ ಇದೆಲ್ಲಾ ಬಂದುದು. ನಾಮಿನೇಷನ್ ವಿರುದ್ಧ ಅಥವಾ ನಾಮಿನೇಷನ್ ವಿಚಾರದಲ್ಲಿ ಚರ್ಚೆ ಮಾಡಲಿಕ್ಕೆ ನಿಲುವಳಿ ಸೂಚನೆ ಮುಖಾಂತರವಾಗಿ ಇಲ್ಲಿ ಬಂದು, ಈಗ ಚರ್ಚೆಗೆ ನಾವು ಏನಾದರೂ ನಮ್ಮ ವಿರುದ್ಧವನ್ನು ಮಾಡಿದ್ದೇವೆಯೋ ? ಯಾವುದೇ ಸಂದರ್ಭದಲ್ಲಿ ಈ ಕಡೆ ಕುಳಿತಂಥ ಯಾವುದೇ ಸದಸ್ಯ ಆ ವಿಚಾರವನ್ನು ನಾವು ಚರ್ಚೆ ಮಾಡಲಿಕ್ಕೆ ಸಿದ್ಧರಿಲ್ಲ ಎಂದು ಹೇಳಿದ್ದಾರೆಯೇ ? ಯಾವುದೇ ರೀತಿಯಲ್ಲಿ ನಾವು ಚರ್ಚೆಗೆ ಆತಂಕಪಡಿಸಿಲ್ಲ. ಸರ್ಕಾರದ ಮೇಲೆ ಬೇಕಾದಷ್ಟು ಆರೋಪಗಳು ಆಯಿತು. ಅನೇಕ ರೀತಿಯಲ್ಲಿ ಟೀಕೆ ಟಿಪ್ಪಣಿಗಳು ಆಯಿತು. ಟೀಕೆ ಟಿಪ್ಪಣಿಗಳನ್ನು ಮಾಡುವುದು, ಅಥವಾ ಸುಸಂಬದ್ಧವಾದ ಆರೋಪಗಳನ್ನು ಮಾಡುವುದು ಸದಸ್ಯರ ಕರ್ತವ್ಯ ಎಂದು ನಾನೂ ತಿಳಿದುಕೊಂಡಿದ್ದೇನೆ. ಆದರೆ ಮಾಡುವಂತಹ ಟೀಕೆಗಳು, ಸತ್ಯಕ್ಕೆ ದೂರವಾಗಿರಬಾರದೂ. ಆ ದಿವಸ ನಾನು ಹೇಳಿದ್ದೇನೆ. ಮಾನ್ಯ ಅಧ್ಯಕ್ಷರು ಯಾವುದೇ ದಿವಸವನ್ನು ನಿರ್ದಿಷ್ಟಪಡಿಸಲಿ, ಯಾವುದೇ ಕಾಲವನ್ನು ನಿಗದಿ ಮಾಡಲಿ, ಆ ದಿವಸ ಚರ್ಚೆಗೆ ನಾವು ಸಿದ್ಧರಿದ್ದೇವೆ ಎಂದು ಹೇಳಿದ್ದೇನೆ. ಆದುದರಿಂದ ನಾನೂ ಈ ಪರಿಸ್ಥಿತಿಯ ಬಗ್ಗೆ ಅತ್ಯಂತ ವಿಷಾದಪಡಬೇಕಾಗುತ್ತದೆ. ಈ ಒಂದು ಘಟನೆಗೆ ಯಾರೂ ಕಾರಣರೋ, ಆ ಘಟನೆಗೆ ಕಾರಣಕರ್ತರಾದವರಿಂದ ಒಂದು ಸ್ವಲ್ಪವಾದರೂ ವಿಷಾದ ವ್ಯಕ್ತವಾಗದಿದ್ದರೆ ಆ ಸಮಸ್ಯೆಯನ್ನು ಬಗೆಹರಿಸತಕ್ಕಂಥಾದ್ದು ಸ್ವಲ್ಪ ಕಷ್ಟ ಆಗಬಹುದು. ಅಷ್ಟೇ ಅಲ್ಲ, ನಾವು ಮುಂದಾನೋಡಬೇಕು. ಕೇವಲ ಈಗ ಒಂದು ಸಣ್ಣ ಸಮಸ್ಯೆ ಹುಟ್ಟಿದುದಕ್ಕಾಗಿ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿದರು, ಆ ವಿಷಯ ಇಲ್ಲಿಗೆ ಮುಗಿಯಿತು ಎಂದು ಹೇಳುವುದಲ್ಲ. ಇಂತಹ ವರ್ತನೆ ಮೊದಲನೇಯದ್ದು ಆಗಿದ್ದರೆ, ಏನೋ ಮನಸ್ಸು ವಿಕಾರ ಆಗುತ್ತಾ ಇರುತ್ತದೆ, ಎಲ್ಲರೂ ಸ್ಥಿತಪ್ರಜ್ಞರು ಅಲ್ಲ, ಎಲ್ಲರೂ ಗಾಂಧೀಜಿ, ವಿನೋಭಾಬಾವೆಯವರು ಅಲ್ಲ. ಅಂತಹ ವಿಕಾರತೆಗೆ ಒಳಗಾದಂತಹ ಸಂದರ್ಭದಲ್ಲಿ ಮಾತುಕತೆ ಬಂತು, ಕೈಯಿಂದ ಏನೋ ಘಟನೆ ನಡೆಯಿತು. ಎಂದು ಇತ್ಯಾದಿಯಾಗಿ ಹೇಳಿ ಮುಗಿಸುವಂತಿಲ್ಲ. ಇಂತಹ ವರ್ತನೆ ಸುಮಾರು ೩-೪ ಸಲ ಆಯಿತು. ಎಲ್ಲಾ ಸದಸ್ಯರಿಗೂ ಹಿಂದಿನ ಘಟನೆಗಳ ನೆನಪು ಇದೆ. ಇದರ ಬಗ್ಗೆ ಪುನಃ ನಾನು ಪ್ರಸ್ತಾಪ ಮಾಡಬೇಕಾದಂತಹ ಅವಶ್ಯಕತೆ ಇಲ್ಲ ಎಂದೂ ನಾನು ಭಾವಿಸುತ್ತೇನೆ.

ಆದ್ದರಿಂದ ಇನ್ನು ಮುಂದೂ ನಾವು ಈ ಮನೆಯ ಗಾಂಭೀರ್ಯ, ಈ ಮನೆಯ ಗೌರವಗಳನ್ನು ಕಾಪಾಡಬೇಕೇ ಬೇಡವೇ ಎಂದೂ ಹೇಳತಕ್ಕಂಥಾದ್ದು ಇಪ್ಪೊತ್ತಿನ ಮುಖ್ಯ ಸವಾಲೂ. ಇಲ್ಲೇನೂ ಯುದ್ಧ ಮಾಡಬೇಕೆಂದೂ ನಾವೆಲ್ಲ ಬಂದಿದ್ದೇವೆಯೇ ? ಕರ್ನಾಟಕ ರಾಜ್ಯದಲ್ಲಿ ಬೇರೆ ಕಡೆಯೆಲ್ಲಾ ಆದಕ್ಕೆ ಬೇಕಾದಷ್ಟು ಅವಕಾಶ ಇದೆ. ಆದಕ್ಕೆ ಇಲ್ಲಿಗೆ ನಾವು ಬಂದಿಲ್ಲ ಅಥವಾ ಪರಸ್ಪರ ಬೈಯಲಿಕ್ಕೂ ಅಲ್ಲ. ನಾವು ಬಂದಿರುವುದು ನಮ್ಮ ರಾಜ್ಯದ, ಕ್ಷೇತ್ರಗಳ ಮತದಾರರ ಸಮಸ್ಯೆಗಳನ್ನು ಚರ್ಚಿಸಿ ಅವುಗಳಿಗೆ ಪರಿಹಾರಗಳನ್ನು ಹುಡುಕುವುದಕ್ಕೆ ನಮ್ಮ ನಮ್ಮನ್ನು ಆರಿಸಿ ಕಳುಹಿಸಿದ ಜನತೆಯ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಆದ್ದರಿಂದ ನಾನು ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತೇನೆ, ಈಗ ಯಾವ ಸೂಚನೆಯನ್ನು ಮಾಡಲಾಗಿದೆಯೋ ಅದನ್ನು ಅವರು ಒಪ್ಪಿಕೊಳ್ಳಲಿ.

ಮಾನ್ಯ ವಿರೋಧ ಪಕ್ಷದ ನಾಯಕಿಯವರು ಆ ಸ್ಥಾನವನ್ನು ವಹಿಸಿಕೊಂಡವೇಲೆ ಈ ಸಭೆಯ ಕಾರ್ಯಕಲಾಪ ಅತ್ಯಂತ ಯೋಗ್ಯ ರೀತಿಯಿಂದ ನಡೆಯಿತು. ಅದನ್ನು ಮೆಚ್ಚಿಕೊಂಡಿದ್ದೇನೆ. ಪತ್ರಿಕೆಯವರಿಗೂ ಈ ಮಾತನ್ನು ಹೇಳಿದ್ದೇನೆ. ಅವರ ಅನುಭವ ಒಂದು ಯೋಗ್ಯತೆ ಅದರ ಪ್ರಭಾವ ಈ ಮನೆಯ ನಡವಳಿಕೆಯ ಮೇಲೆ ಬಿದ್ದಿದೆ. ಆದರೆ ಕೆಲವು ಜನರಿಗೆ ಅದನ್ನು ಸಹಿಸಿಕೊಳ್ಳುವುದಕ್ಕೆ ಆಗಲಿಲ್ಲ, ಈ ಮನೆಯ ಕಾರ್ಯ ಕಲಾಪ ಯೋಗ್ಯ ರೀತಿಯಿಂದ ಆಗುವುದೂ ಅನೇಕ ಜನರಿಗೆ ಹಿಡಿಸುವುದಿಲ್ಲ. ಏಕೆಂದರೆ ಇದೆಲ್ಲಾ ಅಂತಸ್ತಿನ ಮೇಲೆ ಹೋಗಂತ್ತದೆ ನೋಡಿ. ಇಬ್ಬರೂ ಪ್ರಯತ್ನಿಸಿ ಈ ಮನೆಯ ಅಂತಸ್ತನ್ನು ಎತ್ತರಿಸಬೇಕು, ಇದು ಕೆಲವರಿಗೆ ಸಹ್ಯವಾಗದಿದ್ದರೆ ಅದನ್ನು ಅವರು ಮಾಡುವುದಿಲ್ಲ. ಆದ್ದರಿಂದ ನಾನೂ ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ. ಅವರು ಏನು ಸೂಚನೆ ಮಾಡಿದ್ದರೋ ಅದಕ್ಕೆ ಒಂದೂ ಪರತ್ನನ್ನು ಹಾಕಿ ನಾವು ಒಪ್ಪಿಕೊಂಡಿದ್ದೇವೆ, ನಾಮಿನೇಷನ್ ವಿಚಾರದಲ್ಲಿ ನಾವು ಚರ್ಚೆಗೆ ಸಿದ್ಧ. ನೀವೇ

ಒಂದು ದಿನಾಂಕ ವಿಸ್ತೃತ ಕಾಲವನ್ನು ಅದಕ್ಕಾಗಿ ಗೊತ್ತುಮಾಡಿ, ನಿಲುವಳಿ ಸೂಚನೆಯಂನ್ನು ತಾವು ಆ ದಿವಸ ತಿರಸ್ಕಾರ ಮಾಡಿರುವುದರಿಂದ ಆ ರೂಪದಲ್ಲಿ ವಿಸ್ತೃತ ಅದು ಬರುವುದು ಸಾಧ್ಯವಿಲ್ಲ. ಬೇರೆ ಯಾವುದೇ ರೂಪದಲ್ಲಿ ಬರಬಹುದು ಅದಕ್ಕೆ ನಾವು ಸಿದ್ಧ ಇನ್ನು ಸಸ್ಪೆನ್‌ಷನ್ ಮಾಡಿರುವ ವಿಚಾರ, ಅದನ್ನು ಈ ಮನೆಯೇ ತೀರ್ಮಾನ ಮಾಡಬೇಕು, ಅದಕ್ಕೆ ನಾವೆಲ್ಲರೂ ಬದ್ಧರು. ಅದರಲ್ಲಿ ನನ್ನ ವೈಯಂಕ್ತಿಕ ಪಾತ್ರ ಯಾವುದೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ಒಂದು ವಿಷಯವನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈಗ ವಿರೋಧ ಪಕ್ಷದವರು ನಾಲ್ಕು ಜನ ಆಡಳಿತ ಪಕ್ಷದವರು ನಾಲ್ಕು ಜನ ನನ್ನ ಛೇಂಬರಿಗೆ ಬನ್ನಿರಿ. ಅಲ್ಲಿ ಚರ್ಚೆ ಮಾಡೋಣ. ಈಗ ಸಭೆಯನ್ನು ೧೦ ನಿಮಿಷಗಳ ಕಾಲ ವಿಂದು ಡಿದ್ದೇನೆ.

(ಸದನವು ೧೧–೫೫ಕ್ಕೆ ಹತ್ತು ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)

ಸದನವು ಪುನಃ ಸಾಯಂಕಾಲ ೫ ಗಂಟೆ ೨೫ ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಸಭಾಧ್ಯಕ್ಷರಾದ (ಶ್ರೀ ಬಿ .ಜಿ. ಬಣಿಕಾರ್) ಅವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು

(ಕಾಂಗ್ರೆಸ್–ಐ ಪಕ್ಷದ ಸದಸ್ಯರುಗಳು ಧರಣಿ ಕುಳಿತ್ತಿದ್ದರು)

ಅಧ್ಯಕ್ಷರು.—ಇಂದಿನ ಸಭೆ ಮುಂಕ್ತಾಯವಾಗಿ ನಾಳೆ ಬೆಳಿಗ್ಗೆ ೧೧–೦೦ ಗಂಟೆಗೆ ಪುನಃ ಸೇರುವುದು

(ಸಭೆಯು ಸಾಯಂಕಾಲ ೫ ಗಂಟೆ ೨೬ ನಿಮಿಷಕ್ಕೆ ಮುಂಕ್ತಾಯಗೊಂಡು ಪುನಃ ದಿನಾಂಕ ೨೪–೩–೮೭ರಂದು ಮಂಗಳವಾರ ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶ ಗೊಳ್ಳಲು ನಿರ್ಧರಿಸಿತು)